# ಕಾಶ್ಮೀರ: ಭಾವ ಸರೋವರ

ರಸಗಳಾಗಿ ತೋರಿಕೊಳ್ಳುತ್ತವೆಯಷ್ಟೆ; ಮತ್ತೆ ಅವೆಲ್ಲವೂ ಶಾಂತದಲ್ಲಿಯೇ ವಿಶ್ರಾಂತಿಯನ್ನು ಪಡೆಯಬೇಕು – ಎಂಬ ಅಪೂರ್ವ ಕಾಣ್ಕೆಯನ್ನೂ ಒದಗಿಸಿದ. ಎಲ್ಲ ರಸಗಳ ದ್ವಾರಾ ನಾವು ಬಯಸುವುದಾದರೂ ಆನಂದವನ್ನೇ ಅಲ್ಲವೆ? ಅರಸುವುದು ಶಾಂತಸ್ಥಿತಿಯನ್ನೇ ಅಲ್ಲವೆ? ಅಧ್ಯಾತ್ಮಮಾರ್ಗ ಪ್ರತಿಪಾದಿಸುವ ಗಹನವಾದ ನಿವೃತ್ತಿಸ್ವರೂಪವನ್ನು ಕಲಾಮಾರ್ಗದ ಪ್ರವೃತ್ತಿಮೂಲದ ಸುಲಭೋಪಾಯದ ಮೂಲಕ ಸಾಧಿಸಿ ತೋರಿಸಿದ ಹಿರಿಮೆ ಅವನದ್ದಾಯಿತು.

ಇಲ್ಲಿ ಇನ್ನೊಂದು ಸ್ವಾರಸ್ಯ ನೆನಪಾಗುತ್ತಿದೆ. ಶಾಂತರಸವು ಕೇವಲ ಕಲೆಯ ಪರಿವಾರಕ್ಕೆ ಸೇರಿರುವ ಅಥವಾ ಸೇರಬೇಕಾದ ವಿವರವಲ್ಲ; ನಾವು ನಮ್ಮ ಬದುಕಿನ ಎಲ್ಲ ಕ್ಷೇತ್ರಗಳ ಮೂಲಕವೂ ಹಂಬಲಿಸಬೇಕಾದ ದಿಟವಾದ ಫಲವೇ ಅದು ಎನ್ನುವುದು ಪ್ರಾಚೀನ ಕಾಶ್ಮೀರದೇಶದ ಆದರ್ಶವಾಗಿದ್ದಿತು ಎಂದೆನಿಸುತ್ತದೆ. ಏಕೆಂದರೆ ನಾವು ಇತಿಹಾಸದ ಅಧ್ಯಯನ ಮೂಲಕವೂ ಕೊನೆಗೆ ಕಂಡುಕೊಳ್ಳಬೇಕಾದ ಅರಿವು ಎಂದರೆ ಅದು ಶಾಂತರಸವೇ ಎನ್ನುತ್ತದೆ ಅಲ್ಲಿಯ ಬೌದ್ಧಿಕ ಪರಂಪರೆ. ಭಾರತೀಯರಿಗೆ 'ಇತಿಹಾಸಪ್ರಜ್ಞೆ' ಇಲ್ಲ ಎನ್ನುವ ಆರೋಪಗಳನ್ನು ಆಗಾಗ ಕೇಳುತ್ತಿರುತ್ತೇವೆಯಲ್ಲವೆ? ನಮ್ಮ ಇತಿಹಾಸದ ಪರಿಕಲ್ಪನೆಯೇ ಬೇರೆ ರೀತಿಯದು, ಅಲ್ಲವೇ? ಇರಲಿ, ಇಂದು ಯಾವುದನ್ನು 'ಇತಿಹಾಸ' ಎಂದು ಕರೆಯುತ್ತೇವೆಯೋ ಅದೇ ನೆಲೆಯಲ್ಲಿ ಸಂಸ್ಕೃತದಲ್ಲಿ ರಚಿತವಾದ ಮೊದಲ – ಬಹುಶಃ ಕೊನೆಯ ಕೂಡ – ಚಾರಿತ್ರಿಕಕೃತಿ ಎಂದರೆ ಅದು 'ರಾಜತರಂಗಿಣಿ'; ಕಾಶ್ಮೀರವನ್ನು ಆಳಿದ ರಾಜರ ಚರಿತ್ರೆಯ ಕಥನ; ಚಾರಿತ್ರ್ಯದ ಕಥನವೂ ಇದೆಯೆನ್ನಿ! ಅದರ ಕರ್ತೃವಾದ ಕಲ್ಹಣನು ಈ ಕೃತಿಯನ್ನು ಬರೆಯುವುದಕ್ಕೆ ಹೇಳಿರುವ ಕಾರಣ ಇಂದಿಗೂ ಮನನಯೋಗ್ಯವಾಗಿದೆ:

ಕ್ಷಣಭಂಗಿನಿ ಜಂತೂನಾಂ ಸ್ಫುರಿತೇ
ಪರಿಚಿಂತಿತೇ ।
ಮೂರ್ಧಾಭಿಷೇಕಃ ಶಾಂತಸ್ಯ ರಸಸ್ಯಾತ್ರ
ವಿಚಾರ್ಯತಾಮ್ ॥
ತದಮಂದರಸಸ್ಯಂದಸುಂದರೇಯಂ
ನಿಪೀಯತಾಮ್ ॥
ಶ್ರೋತ್ರಶುಕ್ತಿಪುಟೈಃ ಸ್ಪಷ್ಟಮಂಗ
ರಾಜತರಂಗಿಣೀ ॥

ಇದರ ತಾತ್ಪರ್ಯ ಹೀಗೆ: 'ಜಗತ್ತಿನ ಜೀವಜಾಲಗಳ ಕ್ಷಣಭಂಗುರತೆಯನ್ನು – ಎಂದರೆ ಅಶಾಶ್ವತ ಸ್ಥಿತಿಯನ್ನು – ಮನಗಂಡು, ಯಾವ ಕಾಲಕ್ಕೂ ಸುಖವನ್ನು ನೀಡುವ ಶಾಂತರಸವನ್ನು ಈ ಕಾವ್ಯದಲ್ಲಿ ಪ್ರಧಾನ ರಸವನ್ನಾಗಿಸಲಾಗಿದೆ. ಈ ಮಹಾಶಕ್ತಿಶಾಲಿಯಾದ ಶಾಂತರಸ ಎಂಬ ವಿವೇಕದ ರಸಧಾರೆಯಾದ 'ರಾಜತರಂಗಿಣಿ' ಎಂಬ ಈ ಕೃತಿಯನ್ನು ಸಹೃದಯರು ಆಸ್ವಾದಿಸಿ ಆನಂದ ಪಡೆಯಲಿ.'

ಚರಿತ್ರೆಯ ಗ್ರಂಥ ಎಂದರೆ ಅದು ಯುದ್ಧ–ಸಾವು–ನೋವುಗಳ ಆಕರ; ರಾಜ–ಮಹಾರಾಜರ ಏಳ್ಗೆ–ಅವನತಿ, ಮೋಸ–ವಂಚನೆ, ತಂತ್ರ–ಪ್ರತಿತಂತ್ರಗಳ ಒಕ್ಕಣೆ. ಈ ಎಲ್ಲ ಭಯಾನಕವೂ ಜುಗುಪ್ಸಾವಹವೂ ಅಮಂಗಳಕರವೂ ಆದ ವಿವರಗಳ ಮೂಲಕ ನಿರೂಪಿಸಲು ಹೊರಟಿರುವುದು ಶಾಂತರಸ ಎನ್ನುವುದು ಗಮನಾರ್ಹ. ಅಧಿಕಾರವಾಗಲೀ ಐಶ್ವರ್ಯವಾಗಲೀ ಜೀವನವಾಗಲೀ – ಕೊನೆಗೆ ಇಲ್ಲಿಯ ಯಾವುದೂ ಸ್ಥಿರವಲ್ಲ – ಎಂಬ ವಿವೇಕವೇ ಇತಿಹಾಸಕಾವ್ಯದಿಂದ ನಾವು ಪಡೆಯಬೇಕಾದ ರಸಾನುಭವ; ಅದೇ ಶಾಂತರಸಾನುಭವ – ಎಂಬ ಮಹಾದರ್ಶನವನ್ನು ಭಾರತದ ಮೊದಲ ಇತಿಹಾಸಕೃತಿ ಜಗತ್ತಿಗೆ ಬೋಧಿಸುತ್ತಿದೆ. ಈ ವಿವೇಕಕೃತಿಯ ಅವತಾರವಾದದ್ದು ಕಾಶ್ಮೀರದಲ್ಲಿ.

ಇಲ್ಲಿ ಮತ್ತೊಂದು ಸ್ವಾರಸ್ಯವೂ ಕಾಣಿಸುತ್ತಿದೆ.

## ದಾಲ್ ಲೇಕ್‌ನಲ್ಲಿ ತೇಲುವ ಪೇಟೆ

ಶ್ರೀನಗರ ಅಂದಾಕ್ಷಣ ಎಲ್ಲರ ಮನಸ್ಸಿಗೆ ಬರುವುದು ದಾಲ್ ಸರೋವರ. ಶ್ರೀನಗರದ ಜೀವನಾಡಿಯಂತಿರುವ ಝೀಲಂ ನದಿ, ಶ್ರೀನಗರದ ಮೇಲಿನ ಅನುರಾಗದಿಂದ ಉಡುಗೊರೆಯಾಗಿ ಸೃಷ್ಟಿಸಿಕೊಟ್ಟಿರುವಂತೆ ತೋರುವ ಈ ಸುಂದರ ಜಲಾಗಾರ ಜಮ್ಮು ಕಾಶ್ಮೀರದ ಕೊರಳಹಾರದಲ್ಲಿ ಮಿನುಗುವ ಪದಕದಂತಿದೆ. 15.5 ಕಿ.ಮೀ. ಉದ್ದವಿರುವ ಈ ಸರೋವರವನ್ನು ಗಗರಿ ಬಾಲ್, ಲೋಕುತ್ ದಾಲ್, ಬೊದ್ದಾಳ್ ಮತ್ತು ನಗೀನ್ ಎಂಬ ಹೆಸರಿನ ನಾಲ್ಕು ಸೇತುವೆಗಳ ಮೂಲಕ ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ. ಸುತ್ತಮುತ್ತಲಿನ ಹಳ್ಳಿಗಳಿಂದ ರೈತರು ತಾವು ಬೆಳೆದ ತರಕಾರಿಗಳನ್ನು ದೋಣಿಯಲ್ಲಿ ತಂದು ಇಲ್ಲಿನ ತೇಲುವ ಮಾರುಕಟ್ಟೆಯಲ್ಲಿ ಮಾರುತ್ತಾರೆ. ದೋಣಿಗಳ ಮೇಲೆಯೇ ನಡೆಯುವ ಈ ಸಂತೆ 'ಫ್ಲೋಟಿಂಗ್ ಮಾರ್ಕೆಟ್' ಎಂದೇ ಪ್ರಸಿದ್ಧ. ದಾಲ್ ತೇಲುವ ಉದ್ಯಾನಕ್ಕೆ ಹೆಸರುವಾಸಿ. ಚಳಿಗಾಲದಲ್ಲಿ ಈ ಸರೋವರ ಬರ್ಫಿನ ಬಯಲಾಗಿ ಮಾರ್ಪಡುತ್ತದೆ. ಇಲ್ಲಿನ ಹುಡುಗರಿಗೆ ಅದುವೇ ಆಟದ ಮೈದಾನ!

